**ಹೀರೋಸ್ ಎಕರೆ ಸ್ಮಾರಕದಲ್ಲಿ ನಮೀಬಿಯಾದ ಸ್ಥಾಪಕ ಪಿತಾಮಹ ಮತ್ತು ಮೊದಲ ಅಧ್ಯಕ್ಷ ಡಾ. ಸ್ಯಾಮ್ ನುಜೋಮಾ ಅವರಿಗೆ ಗೌರವ ಸಲ್ಲಿಸಿದ ಪ್ರಧಾನಮಂತ್ರಿ (ಜುಲೈ 09, 2025)**

ಜುಲೈ 09, 2025

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಹೀರೋಸ್ ಎಕರೆ ಸ್ಮಾರಕದಲ್ಲಿ ನಮೀಬಿಯಾದ ಸ್ಥಾಪಕ ಪಿತಾಮಹ ಮತ್ತು ಮೊದಲ ಅಧ್ಯಕ್ಷ ಡಾ. ಸ್ಯಾಮ್ ನುಜೋಮಾ ಅವರಿಗೆ ಗೌರವ ನಮನ ಸಲ್ಲಿಸಿದರು.

2. ಡಾ. ಸ್ಯಾಮ್ ನುಜೋಮಾ ಅವರು ನಮೀಬಿಯಾದ ಸ್ವಾತಂತ್ರ್ಯ ಹೋರಾಟಕ್ಕಾಗಿ ತಮ್ಮ ಜೀವನವನ್ನು ಮೀಸಲಿಟ್ಟ ದೂರದೃಷ್ಟಿಯ ನಾಯಕ ಎಂದು ಪ್ರಧಾನಿ ಅವರನ್ನು ಸ್ಮರಿಸಿದರು. ಸ್ವತಂತ್ರ ನಮೀಬಿಯಾದ ಮೊದಲ ಅಧ್ಯಕ್ಷರಾಗಿ, ಡಾ. ನುಜೋಮಾ ಅವರು ರಾಷ್ಟ್ರ ನಿರ್ಮಾಣಕ್ಕೆ ಸ್ಫೂರ್ತಿದಾಯಕ ಕೊಡುಗೆ ನೀಡಿದರು. ಅವರ ಪರಂಪರೆಯು ವಿಶ್ವದಾದ್ಯಂತ ಜನರಿಗೆ ಸ್ಫೂರ್ತಿ ನೀಡುತ್ತಲೇ ಇರುತ್ತದೆ.

3. ಡಾ. ಸ್ಯಾಮ್ ನುಜೋಮಾ ಭಾರತದ ಉತ್ತಮ ಸ್ನೇಹಿತರಾಗಿದ್ದರು. ನವದೆಹಲಿಯಲ್ಲಿ 1986 ರಲ್ಲಿ ನಮೀಬಿಯಾದ ಮೊದಲ ರಾಜತಾಂತ್ರಿಕ ಮಿಷನ್ [ಆ ಸಮಯದಲ್ಲಿ SWAPO] ಸ್ಥಾಪಿಸುವಾಗಿನ ಅವರ ಘನ ಉಪಸ್ಥಿತಿಯನ್ನು ಭಾರತದ ಜನರು ಯಾವಾಗಲೂ ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ.

ವಿಂಡ್ಹೋಕ್

ಜುಲೈ 09, 2025